ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಪಾಲರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 19/4/21

# ಕ್ರಮಗಳ ಜಾರಿಗೆ ಒತ್ತು, ರಾಜ್ಯಪಾಲರ ಸೂಚನೆ

ವಿಜಯವಾಣಿ ಚಿತ್ರ



ಕರೊನಾ ನಿರ್ವಹಣೆ ಕುರಿತು ರಾಜ್ಯಪಾಲ ವಜುಭಾಯಿ ವಾಲಾ ರಾಜಭವನದಲ್ಲಿ ಭಾನುವಾರ ಅಧಿಕಾರಿಗಳ ತುರ್ತು ಸಭೆ ನಡೆಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಸಿಎಂ ಅಪರ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣರೆಡ್ಡಿ, ಆರೋಗ್ಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಭಾಗವಹಿಸಿದ್ದರು.

» **ರಾಜಭವನದಲ್ಲಿ ಅಧಿಕಾರಿಗಳ ತುರ್ತು ಸಭೆ**

ಬೆಂಗಳೂರು: ಕರೊನಾ 2ನೇ ಅಲೆಯ ನಾಗಾಲೋಟ ತಡೆದು, ಸೋಂಕಿತರಿಗೆ ಸಕಾಲಕ್ಕೆ ಸೂಕ್ತ ಚಿಕಿತ್ಸೆ ನೀಡುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮಕಾರಿ ಜಾರಿಗೆ ಒತ್ತು ನೀಡುವಂತೆ ಅಧಿಕಾರಿಗಳಿಗೆ ರಾಜ್ಯಪಾಲ ವಜುಭಾಯಿ ವಾಲಾ ಸೂಚಿಸಿದ್ದಾರೆ. ಸೋಂಕು ಉಲ್ಬಣ, ಹಾಸಿಗೆಗಳು ಸಿಗದೆ ರೋಗಿಗಳ ಪರದಾಟ, ಆಕ್ಸಿಜನ್, ರೆಮ್‌ಡಿಸಿವಿರ್ ಚುಚ್ಚುಮದ್ದು ಕೊರತೆ, ಮುನ್ನೆಚ್ಚರಿಕಾ ನಿಯಮಗಳ ಪಾಲನೆಯಲ್ಲಿ ಜನರ ಅಸಡ್ಡೆ ಕುರಿತ ಮಾಧ್ಯಮಗಳ ವರದಿಗಳನ್ನು ವಾಲಾ ಗಂಭೀರವಾಗಿ ಪರಿಗಣಿಸಿ ಮಧ್ಯೆ ಪ್ರವೇಶಿಸಿದ್ದಾರೆ. ರಾಜಭವನದಲ್ಲಿ ಭಾನುವಾರ ಹಿರಿಯ ಅಧಿಕಾರಿಗಳ ತುರ್ತು ಸಭೆ ಕರೆದು, ಬೆಂಗಳೂರು ಸೇರಿ ರಾಜ್ಯದ ಒಟ್ಟಾರೆ ಪರಿಸ್ಥಿತಿ ಸಮಾಲೋಚಿಸಿದ್ದು, ಸರ್ಕಾರದ ಕ್ರಮಗಳು ಹಾಗೂ ಫಲಿತಗಳ ವಸ್ತುಸ್ಥಿತಿ ಮಾಹಿತಿ ಪಡೆದುಕೊಂಡಿದ್ದಾರೆ. ಇದೇ ವೇಳೆ ಬೇರೆ ರಾಜ್ಯಗಳ ಬೆಳವಣಿಗೆ, ಅಲ್ಲಿನ ಸರ್ಕಾರಗಳ ನಿರ್ಧಾರಗಳನ್ನು ಅವಲೋಕಿಸಿ, ತಜ್ಞರ ಸಲಹೆಗಳು, ತಂತ್ರಜ್ಞಾನ ಬಳಸಿಕೊಂಡು ಹತೋಟಿಯಲ್ಲಿಡಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೊಂದಿಗೆ ರಾಜ್ಯಪಾಲರು ತುಲನೆ ಮಾಡಿದರು ಎಂದು ಮೂಲಗಳು ತಿಳಿಸಿವೆ.